**ಮಾಹಿತಿ ತಂತ್ರಜ್ಞಾನ (ಸೈಬರ್ ಕೆಫೆಗಳಿಗೆ ಮಾರ್ಗದರ್ಶನ) ನಿಯಮಗಳು, 2011 ರ ಪ್ರಮುಖ ಅಂಶಗಳು**

## ಲಾಗ್ ರಿಜಿಸ್ಟರ್

1. ಒಂದು ಸೈಬರ್ ಕೆಫೆಯು ಡಿಜಿಟಲ್ ಅಥವಾ ಪುಸ್ತಕ ರೂಪದಲ್ಲಿ ಲಾಗ್ ರಿಜಿಸ್ಟರನ್ನು ಕನಿಷ್ಟ 1 ವರ್ಷದ ಅವಧಿಗೆ ಹೊಂದಿರಬೇಕು.
2. ಲಾಗ್ ರಿಜಿಸ್ಟರ್‌ನಲ್ಲಿ ಈ ಕೆಳಕಂಡ ವಿವರಗಳು ಒಳಗೊಂಡಿರಬೇಕು.
   a. ಹೆಸರು
   b. ವಿಳಾಸ
   c. ಲಿಂಗ
   d. ಸಂಪರ್ಕ ಸಂಖ್ಯೆ
   e. ಗುರುತಿನ ಪತ್ರದ ವಿಧ ಮತ್ತು ವಿವರ
   f. ದಿನಾಂಕ
   g. ಕಂಪ್ಯೂಟರ್ ಟರ್ಮಿನಲ್ ಗುರುತು
   h. ಲಾಗ್ ಇನ್ ಸಮಯ
   i. ಲಾಗ್ ಔಟ್ ಸಮಯ
3. ಸೈಬರ್ ಕೆಫೆಯು ಪುಸ್ತಕ ಮತ್ತು ಸಿಡಿಯಲ್ಲಿ ಲಾಗ್ ರಿಜಿಸ್ಟರ್‌ನ ಪ್ರತಿಯನ್ನು ಸೈಬರ್ ಕೆಫೆ ರಿಜಿಸ್ಟ್ರೇಶನ್ ಏಜೆನ್ಸಿಯಿಂದ ನಿರ್ದೇಶಿಸಲಾದ ವ್ಯಕ್ತಿ ಅಥವಾ ಏಜೆನ್ಸಿಗೆ ಮುಂದಿನ ತಿಂಗಳ 5ನೇ ತಾರೀಖಿನೊಳಗೆ ನೀಡಬೇಕು (ಸಂಬಂಧಪಟ್ಟ ಸರ್ಕಾರವು ನೇಮಿಸಲಾದ ಮತ್ತು ಸುತ್ತೋಲೆ ಹೊರಡಿಸಲಾದ ಸಂಸ್ಥೆಯೇ ಏಜೆನ್ಸಿ ಆಗಿದೆ)

## ಗುರುತಿನ ದಾಖಲೆ

1. ಸೈಬರ್ ಕೆಫೆಯು ಬಳಕೆದಾರರನ್ನು ಯಾವುದೇ ಕಂಪ್ಯೂಟರನ್ನು ಬಳಸುವ ಮುನ್ನ ಕೆಳಕಂಡ ಯಾವುದಾದರೂ ದಾಖಲೆಯನ್ನು ತೋರಿಸುವಂತೆ ಕೇಳಬೇಕು:
   a. ಶಾಲೆ ಅಥವಾ ಕಾಲೇಜು ವಿತರಿಸಿದ ಗುರುತಿನ ಪತ್ರ; ಅಥವಾ
   b. ಬ್ಯಾಂಕ್ ಅಥವಾ ಪೋಸ್ಟ್ ಆಫೀಸ್ ವಿತರಿಸಿರುವ ಫೋಟೋ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್; ಅಥವಾ
   c. ಪಾಸ್‌ಪೋರ್ಟ್; ಅಥವಾ
   d. ಚುನಾವಣಾ ಗುರುತಿನ ಪತ್ರ; ಅಥವಾ
   e. ಇನ್‌ಕಮ್‌ಟ್ಯಾಕ್ಸ್ ಅಥಾರಿಟಿಯಿಂದ ವಿತರಿಸಲಾದ ಪಾನ್ ಕಾರ್ಡ್ (ಪರ್ಮನೆಂಟ್ ಅಕೌಂಟ್ ನಂಬರ್); ಅಥವಾ
   f. ಸರ್ಕಾರಿ ಸಂಸ್ಥೆ ಅಥವಾ ಮಾಲೀಕರು ವಿತರಿಸಿದ ಗುರುತಿನ ಭಾವಚಿತ್ರ; ಅಥವಾ
   g. ಸಂಬಂಧಿಸಿದ ಸರ್ಕಾರವು ವಿತರಿಸಿದ ವಾಹನ ಚಾಲನೆ ಪರವಾನಿಗೆ ಪತ್ರ; ಅಥವಾ
   h. ಯುನೀಕ್ ಐಡೆಂಟಿಫಿಕೇಶನ್ ಅಥಾರಿಟಿ ಆಫ್ ಇಂಡಿಯ (ಯು.ಐ.ಡಿ.ಎ.ಐ.) ವಿತರಿಸಿರುವ ಸಾಮಾನ್ಯ ಗುರುತಿನ ಸಂಖ್ಯೆ (ಯು.ಐ.ಡಿ)
2. ಸೈಬರ್ ಕೆಫೆಯು ಸ್ಕ್ಯಾನ್ ಆದ ದಾಖಲೆಯ ಪ್ರತಿಯನ್ನು ಅಥವಾ ದಾಖಲೆಯ ನಕಲನ್ನು ಸಂಗ್ರಹಿಸಿಡಬೇಕು.
3. ಸೈಬರ್ ಕೆಫೆಯವರಿಗೆ ಬಳಕೆದಾರ ವೆಬ್ ಕ್ಯಾಮರಾ ಬಳಸಿದ್ದರೆ ಅಥವಾ ಅದು ಸೈಬರ್ ಕೆಫೆಯ ರಿಜಿಸ್ಟರ್‌ನಲ್ಲಿ ಒಂದು ಭಾಗವಾಗಿದ್ದರೆ ಡಿಜಿಟಲ್ ಅಥವಾ ಪುಸ್ತಕ ರೂಪದಲ್ಲಿ ಫೋಟೋವನ್ನು ತೆಗೆಯಬಹುದಾಗಿದೆ.

## ವೆಬ್‌ಸೈಟ್ ಬಳಕೆ

1. ಸೈಬರ್ ಕೆಫೆಯು ಸೈಬರ್ ಕೆಫೆಯಲ್ಲಿ ಬಳಸಲಾದ ವೆಬ್‌ಸೈಟ್‌ಗಳ ಹಿಸ್ಟರಿಯ ಬ್ಯಾಕಪ್ ಮಾಡಿ ಸಂಗ್ರಹಿಸಿಡಬೇಕು.
2. ಎಲ್ಲಾ ಕಂಪ್ಯೂಟರ್‌ಗಳಲ್ಲಿ ವಾಣಿಜ್ಯಾತ್ಮಕ ಸುರಕ್ಷತೆ ಅಥವಾ ಫಿಲ್ಟರ್ ಮಾಡುವ ಸಾಫ್ಟ್‌ವೇರ್ ಹೊಂದಿರಬೇಕು ಇದರಿಂದ ಸಾಧ್ಯವಾಗಬಹುದಾದ ಶಿಶು ಅಶ್ಲೀಲತೆಯನ್ನೊಳಗೊಂಡು ಅಶ್ಲೀಲ ವಿಷಯಗಳನ್ನು ಮತ್ತು ಅನಪೇಕ್ಷಿತ ಮಾಹಿತಿ ವಿನಿಮಯವನ್ನು ತಡೆಯುವುದು ಸಾಧ್ಯವಿದೆ.

**ಭೌತಿಕ ವಿನ್ಯಾಸ ಮತ್ತು ಕಂಪ್ಯೂಟರ್ ಮೂಲಗಳ ವ್ಯವಸ್ಥೆ**

1. ಎಲ್ಲಾ ಕಂಪ್ಯೂಟರ್‌ಗಳ ಸ್ಕ್ರೀನ್‌ಗಳು ವಿಭಜಕದಲ್ಲಿ ಅಥವಾ ಕ್ಯೂಬಿಕಲ್‌ನಲ್ಲಿ ಹೊರತುಪಡಿಸಿ, ಅವುಗಳ ಮುಖ 'ಹೊರಾಂಗಣ'ವಾಗಿರಬೇಕು. ಉದಾ. ಅವು ಸಾಮನ್ಯವಾಗಿ ಸೈಬರ್ ಕೆಫೆಯಲ್ಲಿ ತೆರೆದ ಕಡೆಯಲ್ಲಿ ಮುಖ ಮಾಡಿರಬೇಕು.
2. ಎಲ್ಲಾ ಕಂಪ್ಯೂಟರ್‌ಗಳ ಮತ್ತು ಸರ್ವರ್‌ನ ಸಮಯದ ಗಡಿಯಾರವು ಭಾರತೀಯ ಕಾಲಮಾನದಲ್ಲಿರುವಂತೆ ಸರ್ವರ್ ಅನ್ನು ಅಳವಡಿಸಿರಬೇಕು.
3. ಸೈಬರ್ ಕೆಫೆಯು ಬಳಕೆದಾರನಿಗೆ ಕಂಪ್ಯೂಟರ್‌ನ ಸೆಟ್ಟಿಂಗ್ ಬದಲಾಯಿಸುವುದಕ್ಕೆ ಸಹಕರಿಸಬಾರದು ಮತ್ತು ಹಾಗೆ ಮಾಡಲು ಅವಕಾಶವನ್ನು ನೀಡಬಾರದು.
4. ಸೈಬರ್ ಕೆಫೆಯು ಲಾಗ್ ರಿಜಿಸ್ಟರನ್ನು ದುರುಪಯೋಗ ಮಾಡಿಕೊಳ್ಳಬಾರದು ಅಥವಾ ತಿದ್ದುಪಡಿ ಮಾಡಬಾರದು.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: http://www.mit.gov.in/sites/upload_files/dit/files/GSR315E_10511(1).pdf

---



**ಪ್ರಕಟಣೆ**

ನವದೆಹಲಿ, 11ನೇ ಏಪ್ರಿಲ್, 2011

**ಜಿ.ಎಸ್.ಆರ್. 315(ಇ).–** 87ನೇ ಸೆಕ್ಷೆನ್ನಿನ ಸಬ್ ಸೆಕ್ಷೆನ್ (2)ರ ಕಾಯಿದೆಯನ್ವಯ ಅಧಿಕಾರವನ್ನು ನಡೆಸಲು ಮಾಹಿತಿ ತಂತ್ರಜ್ಞಾನ ಕಾಯಿದೆಯ 79ನೇ ಸೆಕ್ಷೆನ್ನಿನ ಸಬ್ ಸೆಕ್ಷೆನ್ (2)ನ್ನು ತಿಳಿದಿರತಕ್ಕದ್ದು. ಕೇಂದ್ರ ಸರ್ಕಾರವು ಈ ಕೆಳಕಂಡಂತೆ ನಿಯಮಾವಳಿಗಳನ್ನು ರೂಪಿಸಿದೆ, ಅವುಗಳೆಂದರೆ:–

**1. ಚಿಕ್ಕ ಶಿರೋನಾಮೆ ಮತ್ತು ಪ್ರಾರಂಭ.–** (1) ಇವುಗಳನ್ನು ಮಾಹಿತಿ ತಂತ್ರಜ್ಞಾನ ನಿಯಮಗಳು, 2011 (ಸೈಬರ್ ಕೆಫೆಗಳಿಗೆ ಮಾರ್ಗದರ್ಶನ) ಎಂದು ಕೂಡ ಕರೆಯುತ್ತಾರೆ.

**2. ವಿವರಣೆಗಳು** – (1) ಈ ನಿಯಮಾವಳಿಗಳಲ್ಲಿ, ಒಳಗೊಳ್ಳದಿದ್ದಾಗ ಅಗತ್ಯವಾದವುಗಳೆಂದರೆ,–

(a) "ಕಾಯಿದೆ" ಎಂದರೆ ಮಾಹಿತಿ ತಂತ್ರಜ್ಞಾನದ ಕಾಯಿದೆ, 2000 (2000ರ 21);
(b) "ಸಂಬಂಧಿಸಿದ ಸರ್ಕಾರ" ಎಂದರೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿನ ಆಢಳಿತ;
(c) "ಸೈಬರ್ ಕೆಫೆ" ಸೈಬರ್ ಕೆಫೆಯನ್ನು ಕಾಯಿದೆಯ 2ನೇ ಸೆಕ್ಷನ್‌ನ ಸಬ್ ಸೆಕ್ಷನ್ (1)ರ ಉಪನಿಯಮದಲ್ಲಿ ವಿವರಿಸಲಾಗಿದೆ.
(d) "ಕಂಪ್ಯೂಟರ್ ಮೂಲ" ಎಂದರೆ ಕಂಪ್ಯೂಟರ್ ಮೂಲವನ್ನು ಕಾಯಿದೆಯ 2ನೇ ಸೆಕ್ಷನ್‌ನ ಸಬ್ ಸೆಕ್ಷನ್ (1)ರ (ಕೆ) ಉಪನಿಯಮದಲ್ಲಿ ವಿವರಿಸಲಾಗಿದೆ.
(e) "ದತ್ತಾಂಶ" ಎಂದರೆ ದತ್ತಾಂಶವನ್ನು ಕಾಯಿದೆಯ 2ನೇ ಸೆಕ್ಷನ್‌ನ ಸಬ್ ಸೆಕ್ಷನ್ (1)ರ (ಒ) ಉಪನಿಯಮದಲ್ಲಿ ವಿವರಿಸಲಾಗಿದೆ.
(f) "ಮಾಹಿತಿ" ಎಂದರೆ ಮಾಹಿತಿಯನ್ನು ಕಾಯಿದೆಯ 2ನೇ ಸೆಕ್ಷನ್‌ನ ಸಬ್ ಸೆಕ್ಷನ್ (1)ರ (ವಿ) ಉಪನಿಯಮದಲ್ಲಿ ವಿವರಿಸಲಾಗಿದೆ.
(g) "ಇಂಟರ್ ಮೀಡಿಯರಿ" ಎಂದರೆ ಇಂಟರ್ ಮೀಡಿಯರಿಯನ್ನು ಕಾಯಿದೆಯ 2ನೇ ಸೆಕ್ಷನ್‌ನ ಸಬ್ ಸೆಕ್ಷನ್ (1)ರ (ಡಬ್ಲ್ಯೂ) ಉಪನಿಯಮದಲ್ಲಿ ವಿವರಿಸಲಾಗಿದೆ.
(h) "ರಿಜಿಸ್ಟ್ರೇಶನ್ ಏಜೆನ್ಸಿ" ಎಂದರೆ ಸರ್ಕಾರದಿಂದ ನೇಮಿಸಲ್ಪಟ್ಟ ನಿಗದಿತವಾಗಿ ಸೈಬರ್ ಕೆಫೆಯನ್ನು ನಿಯಂತ್ರಿಸುವ ಏಜೆನ್ಸಿಯಾಗಿದೆ.

(i) "ಲಾಗ್ ರಿಜಿಸ್ಟರ್" ಎಂದರೆ ಸೈಬರ್ ಕೆಫೆಯವರು ನಿರ್ವಹಿಸುವ ಕಂಪ್ಯೂಟರ್‌ನ ಮೂಲದ ಬಳಕೆ ಮತ್ತು ಉಪಯೋಗವನ್ನು ನಮೂದು ಮಾಡುವುದಾಗಿದೆ.



(j) " ಬಳಕೆದಾರ" ಎಂದರೆ ಕಂಪ್ಯೂಟರ್‌ನ ಮೂಲ ಮಾಹಿತಿಯನ್ನು ಬಳಕೆ ಮಾಡುವ ವ್ಯಕ್ತಿ ಅಥವಾ ಜಂಟಿಯಾಗಿ ಸೈಬರ್ ಕೆಫೆಯ ಕಂಪ್ಯೂಟರ್ ಮಾಹಿತಿಯನ್ನು ಬಳಸುವ ವ್ಯಕ್ತಿಗಳು ಎಂದರ್ಥ.

(2) ಉಳಿದೆಲ್ಲಾ ಪದಗಳು ಮತ್ತು ಉಚ್ಚಾರಣೆಗಳು ಬಳಸಿದ ಮತ್ತು ನಮೂದಾಗಿರದ ನಿಯಮಗಳು ಕಾಯಿದೆಯಲ್ಲಿ ನಮೂದಾಗಿರುತ್ತವೆ ಅವುಗಳನ್ನು ಕಾಯಿದೆಯಲ್ಲಿಯೇ ವಿವರಿಸಲಾಗಿರುತ್ತದೆ.

3. **ಸೈಬರ್ ಕೆಫೆಗಳನ್ನು ನೋಂದಾಯಿಸುವ ಏಜೆನ್ಸಿ.**–(1) ಎಲ್ಲಾ ಸೈಬರ್ ಕೆಫೆಗಳು ಒಂದು ಏಜೆನ್ಸಿಯಲ್ಲಿ ಏಕರೂಪದ ನೋಂದಾವಣೆ ಸಂಖ್ಯೆಯೊಂದಿಗೆ ನೋಂದಾಯಿಸಲ್ಪಟ್ಟ ಏಜೆನ್ಸಿಯೇ ನೋಂದಾವಣಾ ಏಜೆನ್ಸಿಯಾಗಿದ್ದು, ಅದನ್ನು ಸಂಬಂಧಿಸಿದ ಸರ್ಕಾರವು ಪ್ರಕಟಿಸುತ್ತದೆ. ನೋಂದಾವಣೆಯ ವಿಶಾಲ ವಿಧಾನ ಇವುಗಳನ್ನೊಳಗೊಂಡಿದೆ.

(i) ಸಂಸ್ಥೆಯ ಹೆಸರು;

(ii) ಈ ಮೈಲ್ ವಿಳಾಸ, ಸಂಪರ್ಕ ವಿವರಗಳೊಂದಿಗೆ ವಿಳಾಸ;

(iii) ಏಕಸ್ವಾಮ್ಯದ ಅಥವಾ ಪಾಲುದಾರಿಕೆಯ ಅಥವಾ ಸ್ವ ಮಾಲೀಕತ್ವದ ಅಥವಾ ಸಂಸ್ಥೆ ಅಥವಾ ಕಂಪನಿ;

(iv) ಸ್ಥಾಪನೆಯಾದ ದಿನಾಂಕ;

(v) ಮಾಲೀಕರ/ಪಾಲುದಾರರ/ಒಡೆಯರ/ನಿರ್ದೇಶಕರ ಹೆಸರು;

(vi) ನೋಂದಾಯಿತವಾಗಿದೆಯೇ ಅಥವಾ ಇಲ್ಲವೇ (ಹೌದಾದರೆ ಉದ್ಯಮಗಳ ನೋಂದಣಿ ಅಥವಾ ಕಂಪನಿಗಳ ನೋಂದಣಿ ಅಥವಾ ಸಂಸ್ಥೆಗಳ ನೋಂದಾವಣೆ ಪತ್ರ); ಹಾಗೂ

(vii) ಸೈಬರ್ ಕೆಫೆಯಲ್ಲಿ ನೀಡಲಾಗುವ ಸೌಲಭ್ಯಗಳ ವಿವರ.

ನೋಂದಾವಣಾ ಏಜೆನ್ಸಿಯ ಅಧಿಕಾರಿಯು ವಯುಕ್ತಿಕವಾಗಿ ಭೇಟಿ ನೀಡಿದ ನಂತರದಲ್ಲಿ ಸೈಬರ್ ಕೆಫೆಯ ನೋಂದಾವಣೆಯಾಗುತ್ತದೆ.

(2) ನೋಂದಾವಣಾ ಏಜೆನ್ಸಿಯ ವೆಬ್‌ಸೈಟಿನಲ್ಲಿ ಈ ಸೈಬರ್ ಕೆಫೆಯ ವಿವರಗಳು ಪ್ರಕಟವಾಗಿರಬೇಕು.

(3) ಸಂಬಂಧಪಟ್ಟ ಸರ್ಕಾರವು ಆನ್‌ಲೈನ್‌ನಲ್ಲಿ ನೋಂದಾಯಿಸಲು ಆನ್‌ಲೈನ್ ನೋಂದಾವಣೆಗೆ ವ್ಯವಸ್ಥೆಯನ್ನು ಕಲ್ಪಿಸಿರಬೇಕು.

(4) ಕೇಂದ್ರ ಸರ್ಕಾರದ ನಿಯಮಾವಳಿಗಳ ಪ್ರಕಾರ ಪ್ರತ್ಯೇಕವಾಗಿ ಸಂಬಂಧಿಸಿದ ಸರ್ಕಾರವು ಪ್ರಕಟಿಸಲಾದ ನೋಂದಾವಣಾ ಏಜೆನ್ಸಿಗಳವರು ನೋದಾವಣೆಯ ವಿಧಾನವನ್ನು ಅನುಸರಿಸಬೇಕಾಗುತ್ತದೆ.

4. **ಬಳಕೆದಾರರ ಗುರುತು.–** (1) ಬಳಕೆದಾರನು ತನ್ನ ಗುರುತಿನ ಪತ್ರವನ್ನು ನೀಡದೇ ಇದ್ದಾಗ ಸೈಬರ್ ಕೆಫೆಯವರು ಅವಕಾಶವನ್ನು ಮಾಡಿಕೊಡಬಾರದು. ಸೈಬರ್ ಕೆಫೆಯು ಒಪ್ಪಿಗೆಯಾಗುವ ಗುರುತಿನ ಪತ್ರವನ್ನು ಪರಿಶೀಲಿಸಿದ ನಂತರವೇ ಅವಕಾಶ ಮಾಡಿಕೊಡಬೇಕು. ಬಳಕೆದಾರರು ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ದಾಖಲೆಯಿರಬೇಕು :–

(i) ಶಾಲೆ ಅಥವಾ ಕಾಲೇಜು ವಿತರಿಸಿದ ಗುರುತಿನ ಪತ್ರ; ಅಥವಾ

(ii) ಬ್ಯಾಂಕ್ ಅಥವಾ ಪೋಸ್ಟ್ ಆಫೀಸ್ ವಿತರಿಸಿರುವ ಫೋಟೋ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್; ಅಥವಾ

(iii) ಪಾಸ್‌ಪೋರ್ಟ್; ಅಥವಾ

(iv) ಚುನಾವಣಾ ಗುರುತಿನ ಪತ್ರ; ಅಥವಾ

(v) ಇನ್‌ಕಮ್‌ಟ್ಯಾಕ್ಸ್ ಅಥಾರಿಟಿಯಿಂದ ವಿತರಿಸಲಾದ ಪಾನ್ ಕಾರ್ಡ್ (ಪರ್ಮನೆಂಟ್ ಅಕೌಂಟ್ ನಂಬರ್); ಅಥವಾ

(vi) ಸರ್ಕಾರಿ ಸಂಸ್ಥೆ ಅಥವಾ ಮಾಲೀಕರು ವಿತರಿಸಿದ ಗುರುತಿನ ಭಾವಚಿತ್ರ; ಅಥವಾ

(vii) ಸಂಬಂಧಿಸಿದ ಸರ್ಕಾರವು ವಿತರಿಸಿದ ವಾಹನ ಚಾಲನೆ ಪರವಾನಿಗೆ ಪತ್ರ; ಅಥವಾ

(viii) ಯುನೀಕ್ ಐಡೆಂಟಿಫಿಕೇಶನ್ ಅಥಾರಿಟಿ ಆಫ್ ಇಂಡಿಯ (ಯು.ಐ.ಡಿ.ಎ.ಐ.) ವಿತರಿಸಿರುವ ಸಾಮಾನ್ಯ ಗುರುತಿನ ಸಂಖ್ಯೆ (ಯು.ಐ.ಡಿ)

(2) ಬಳಕೆದಾರರ ಗುರುತಿನ ದಾಖಲೆಯನ್ನು ಸೈಬರ್ ಕೆಫೆಯವರು ಅದರ ನಕಲನ್ನು ಅಥವಾ ಸ್ಕ್ಯಾನ್ ಮಾಡಿದ ಪ್ರತಿಯನ್ನು ದಾಖಲಿಸಿಡಬೇಕು ಮತ್ತು ಸೈಬರ್ ಕೆಫೆಯ ನಡೆಸುವವರು ದಾಖಲೆಯನ್ನು ದೃಢೀಕರಿಸಬೇಕು. ಈ ರೀತಿಯ ದಾಖಲೆಗಳನ್ನು ಕನಿಷ್ಟ ಒಂದು ವರ್ಷದವರೆಗಾದರೂ ಸಂಗ್ರಹಿಸಿಟ್ಟುಕೊಳ್ಳಬೇಕು.

(3) ಸಬ್ ರೂಲ್ (1)ರ ಅಡಿಯಲ್ಲಿ ಗುರುತಿನ ಪತ್ರದ ಜೊತೆಯಲ್ಲಿ ಆತನ ಭಾವಚಿತ್ರವನ್ನು ಸೈಬರ್ ಕೆಫೆಯ ಯಾವುದಾದರೊಂದು ಕಂಪ್ಯೂಟರ್‌ನಲ್ಲಿ ಅಳವಡಿಸಿದ ವೆಬ್ ಕ್ಯಾಮರಾದಿಂದ ಫೋಟೋ ತೆಗೆದಿಡಬಹುದಾಗಿದೆ. ಅಂತಹ ವೆಬ್ ಕ್ಯಾಮರಾದಲ್ಲಿ ಬಳಕೆದಾರನನ್ನು ಸೈಬರ್ ಕೆಫೆಯ ಪ್ರತಿನಿಧಿ ದೃಢೀಕರಿಸಿ, ಲಾಗ್ ರಿಜಿಸ್ಟರ್‌ನ ಪುಸ್ತಕ ಅಥವಾ ದೃಷ್ಯ ರೂಪದಲ್ಲಿ ನಿರ್ವಹಿಸಬೇಕು.

(4) ಸಬ್ ರೂಲ್ (1)ರಂತೆ ಅಪ್ರಾಪ್ತ ವಯಸ್ಕರು ಫೋಟೋ ಗುರುತಿನ ಚಿತ್ರ ಇಲ್ಲದಿರುವಾಗ ಪ್ರಾಪ್ತ ವಯಸ್ಕರ ದಾಖಲೆಯ ಅವಶ್ಯಕತೆಯಿರುತ್ತದೆ.

(5) ಒಬ್ಬ ವ್ಯಕ್ತಿಯನ್ನು ಸಬ್ ರೂ (1)ರ ಪ್ರಕಾರ ಗುರುತಿನ ಪತ್ರವನ್ನು ಹಾಜರು ಪಡಿಸಿ ಮತ್ತು ಅದನ್ನು ಸಬ್ ರೂಲ್ (2)ರಂತೆ ನಿರ್ವಹಿಸಿದ ನಂತರ ಬಳಕೆದಾರನಾಗಿ ಸೈಬರ್ ಕೆಫೆಯಲ್ಲಿ ಅವಕಾಶವನ್ನು ನೀಡಬೇಕು.

(6) ಸೈಬರ್ ಕೆಫೆಯವರು ಬಳಕೆದಾರನ ಬಗ್ಗೆ ಯಾವುದಾದರೂ ಅನುಮಾನಗಳು ಬಂದಲ್ಲಿ ತಕ್ಷಣವೇ ಸಂಬಂಧಿಸಿದ ಪೋಲಿಸರಿಗೆ ವರದಿಯನ್ನು ನೀಡಬೇಕು.

5. **ಲಾಗ್ ರಿಜಿಸ್ಟರ್.–** (1) ಬಳಕೆದಾರನ ಗುರುತಿನ ಪರಿಶೀಲನೆಯ ನಂತರ ಮತ್ತು ವ್ಯಕ್ತಿಯ ಜೊತೆಗೆ ಬಂದಂತಹವರನ್ನು ರೂಲ್ 4ರ ಸಬ್ ರೂಲ್ (1)ರ ಪ್ರಕಾರ ಇರಬೇಕು. ಸೈಬರ್ ಕೆಫೆಯು ದಾಖಲೆಯಿಡಬೇಕು ಮತ್ತು ಪ್ರತಿ ಬಳಕೆದಾರನ ಹಾಗೂ ಅವನ ಜೊತೆ ಬಂದವರ ಅಗತ್ಯದ ಮಾಹಿತಿ ಏನಾದರೂ ಇದ್ದರೆ ದಾಖಲಿಸಬೇಕು, ಇದನ್ನು ಕನಿಷ್ಟ ಒಂದು ವರ್ಷದ ಅವಧಿಗೆ ನಿರ್ವಹಿಸಬೇಕು.

(2) ಸೈಬರ್ ಕೆಫೆಯು ಲಾಗ್ ರಿಜಿಸ್ಟರ್ ಅನ್ನು ಆನ್ ಲೈನ್ ರೀತಿಯಲ್ಲಿಯೂ ನಿರ್ವಹಿಸಬಹುದು. ಅಂತಹ ಆನ್‌ಲೈನ್ ರೀತಿಯ ಲಾಗ್ ರಿಜಿಸ್ಟರ್ ಅನ್ನು ಡಿಜಿಟಲ್ ಅಥವಾ ಎಲೆಕ್ಟ್ರಾನಿಕ್‌ನ್ನು ಬಳಸಿ ದೃಢೀಕರಿಸಬೇಕು.

ಸಹಿ. ಲಾಗ್ ರಿಜಿಸ್ಟರ್‌ನಲ್ಲಿ ಬಳಕೆದಾರನ ಈ ಕೆಳಕಂಡ ವಿವರಗಳು ಕನಿಷ್ಟ ಇರಲೇಬೇಕು, ಅವುಗಳೆಂದರೆ :–

(i) ಹೆಸರು

(ii) ವಿಳಾಸ

(iii) ಲಿಂಗ

(iv) ಸಂಪರ್ಕ ಸಂಖ್ಯೆ

(v) ಗುರುತಿನ ಪತ್ರದ ವಿಧ ಮತ್ತು ವಿವರ

(vi) ದಿನಾಂಕ

(vii) ಕಂಪ್ಯೂಟರ್ ಟರ್ಮಿನಲ್ ಗುರುತು

(viii) ಲಾಗ್ ಇನ್ ಸಮಯ

(ix) ಲಾಗ್ ಔಟ್ ಸಮಯ

(3) ಸೈಬರ್ ಕೆಫೆಯವರು ಲಾಗ್ ರಿಜಿಸ್ಟರ್‌ನ ಮಾಸಿಕ ವರದಿಯನ್ನು ಸಿದ್ಧಪಡಿಸಿ ಪ್ರತಿ ದಿನಾಂಕವಾರು ಕಂಪ್ಯೂಟರ್‌ನ ಬಳಕೆಯ ವಿವರದೊಂದಿಗೆ ಸಿದ್ಧಪಡಿಸಬೇಕು ಮತ್ತು ಅದರ ಪುಸ್ತಕ ಮತ್ತು ಸಿ.ಡಿ. ರೂಪದ ನಕಲನ್ನು ನೋಂದಾವಣೆ ಏಜೆನ್ಸಿ ನಿರ್ದೇಶಿಸಿದ ವ್ಯಕ್ತಿ ಅಥವಾ ಏಜೆನ್ಸಿಗೆ ಮುಂದಿನ ತಿಂಗಳ 5ನೇ ತಾರೀಖಿನ ಒಳಗೆ ನೀಡುವುದು.

(4) ಬಳಕೆದಾರರು ಯಾವುದೇ ಕಂಪ್ಯೂಟರ್ ಬಳಸಿ ಲಾಗ್ ಇನ್ ಅಥವಾ ಬಳಕೆ ಮಾಡಿದಾಗ ಅದರ ಬ್ಯಾಕ್ ಅಪ್ ದಾಖಲೆಗಳನ್ನು ಸಂಗ್ರಹಿಸುವುದು ಮತ್ತು ನಿರ್ವಹಿಸುವುದು ಸೈಬರ್ ಕೆಫೆಯ ಮಾಲೀಕರ ಜವಾಬ್ದಾರಿಯಾಗಿದ್ದು ಕನಿಷ್ಟ ಒಂದು ವರ್ಷದ ವರೆಗೆ ಈ ಕೆಳಕಂಡವುಗಳ ಬ್ಯಾಕ್ ಅಪ್ ಇಡಬೇಕು.

(i) ಸೈಬರ್ ಕೆಫೆಯಲ್ಲಿ ಬಳಸಲಾಗಿರುವ ಕಂಪ್ಯೂಟರ್ ಬಳಕೆ ಮಾಡಿದ ವೆಬ್ ಸೈಟ್‌ಗಳ ಹಿಸ್ಟರಿ;

(ii) ಸೈಬರ್ ಕೆಫೆಯಲ್ಲಿ ಸ್ಥಾಪಿತವಾದ ಫ್ರಾಕ್ಸಿ ಸರ್ವರ್‌ನ ಲಾಗ್‌ಗಳು.

ಸೈಬರ್ ಕೆಫೆಯವರು "ಆಡಿಟಿಂಗ್ ಮತ್ತು ಲಾಗಿಂಗ್ ಮಾರ್ಗದರ್ಶನ – CISG-2008-01" ಇದನ್ನು ಕಾಲಕಾಲಕ್ಕೆ ರಚಿಸಿ ಮತ್ತು ತಿದ್ದುಪಡಿಮಾಡಿ ಇಂಡಿಯನ್ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ (CERT-In) ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಲಾಗ್ ನೋಡಿರಿ. ಈ ದಾಖಲೆಗಳು www.cert-in.orq.in ರಲ್ಲಿ ಲಭ್ಯವಿದೆ.

(5) ಸೈಬರ್ ಕೆಫೆಯು ಲಾಗ್ ರಿಜಿಸ್ಟರನ್ನು ತಿದ್ದುಪಡಿ ಮಾಡದೇ ಮತ್ತು ಸುರಕ್ಷಿತವಾಗಿ ಕನಿಷ್ಟ ಒಂದು ವರ್ಷದ ಅವಧಿಗೆ ನಿರ್ವಹಿಸಿರುವುದನ್ನು ಖಾತರಿ ಪಡಿಸಿಕೊಳ್ಳಬೇಕು.

6. **ಕಂಪ್ಯೂಟರ್‌ನ ಲಭ್ಯತೆ ಮತ್ತು ಭೌತಿಕ ವಿನ್ಯಾಸಗಳ ನಿರ್ವಹಣೆ.–** (1) ವಿಭಜಕಗಳ ವ್ಯವಸ್ಥೆ ಅಥವಾ ಸ್ಥಾಪನೆ ಏನಾದರೂ ಸೈಬರ್ ಕೆಫೆಯಲ್ಲಿದ್ದರೆ, ಅದು ನೆಲದ ಮಟ್ಟದಿಂದ ನಾಲ್ಕುವರೆ ಅಡಿಗಳ ಎತ್ತರವನ್ನು ಮೀರಬಾರದು.

(2) ಎಲ್ಲಾ ಕಂಪ್ಯೂಟರ್‌ಗಳ ಸ್ಕ್ರೀನ್‌ಗಳು ವಿಭಜಕದಲ್ಲಿ ಅಥವಾ ಕ್ಯೂಬಿಕಲ್‌ನಲ್ಲಿ ಹೊರತುಪಡಿಸಿ, ಅವುಗಳ ಮುಖ 'ಹೊರಾಂಗಣ'ವಾಗಿರಬೇಕು. ಉದಾ. ಅವು ಸಾಮನ್ಯವಾಗಿ ಸೈಬರ್ ಕೆಫೆಯಲ್ಲಿ ತೆರೆದ ಕಡೆಯಲ್ಲಿ ಮುಖ ಮಾಡಿರಬೇಕು.

(3) ಸೈಬರ್ ಕೆಫೆಯಲ್ಲಿ ಯಾವುದಾದರೂ ವಿಭಜಕದಲ್ಲಿ ಅಥವಾ ಕ್ಯೂಬಿಕಲ್ ಇದ್ದರೆ ಅದರಲ್ಲಿ ಅಪ್ರಾಪ್ತ ವಯಸ್ಕರಿಗೆ ವಿಭಜಕದಲ್ಲಿ ಅಥವಾ ಕ್ಯೂಬಿಕಲ್‌ನಲ್ಲಿ ಅಪ್ರಾಪ್ತರ ತಂದೆತಾಯಿ ಅಥವಾ ಪೋಷಕರು ಇಲ್ಲದಿರುವಾಗ ಅವಕಾಶ ನೀಡಬಾರದು.

(4) ಸೈಬರ್ ಕೆಫೆಯಲ್ಲಿ ಸ್ಥಾಪಿತ ಸರ್ವರ್ ಮತ್ತು ಎಲ್ಲಾ ಕಂಪ್ಯೂಟರ್ ಸಿಸ್ಟಮ್‌ಗಳ ಸಮಯದ ಗಡಿಯಾರಗಳು ಭಾರತೀಯ ಕಾಲಮಾನದಲ್ಲಿ ನಿರ್ವಹಿಸಿರಬೇಕು.

(5) ಎಲ್ಲಾ ಕಂಪ್ಯೂಟರ್‌ಗಳಲ್ಲಿ ವಾಣಿಜ್ಯಾತ್ಮಕ ಸುರಕ್ಷತೆ ಅಥವಾ ಫಿಲ್ಟರ್ ಮಾಡುವ ಸಾಫ್ಟ್‌ವೇರ್ ಹೊಂದಿರಬೇಕು ಇದರಿಂದ ಸಾಧ್ಯವಾಗಬಹುದಾದ ಶಿಶು ಅಶ್ಲೀಲತೆಯನ್ನೊಳಗೊಂಡು ಅಶ್ಲೀಲ ವಿಷಯಗಳನ್ನು ಮತ್ತು ಅನಪೇಕ್ಷಿತ ಮಾಹಿತಿ ವಿನಿಮಯವನ್ನು ತಡೆಯುವುದು ಸಾಧ್ಯವಿದೆ.

(6) ಸೈಬರ್ ಕೆಫೆಯು ತನ್ನ ಕಂಪ್ಯೂಟರ್‌ಗಳನ್ನು ಯಾವುದೇ ಅಕ್ರಮ ಚಟುವಟಿಕೆಗಳಿಗೆ ಬಳಕೆಯಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

(7) ಸೈಬರ್ ಕೆಫೆಯು ಅದು ಸ್ಪಷ್ಟವಾಗಿ ಬಳಕೆದಾರರಿಗೆ ಕಾಣುವಂತಿರಬೇಕು. ಅಶ್ಲೀಲ ಸೈಟ್‌ಗಳನ್ನು ನೋಡದಂತೆ ಹಾಗೆಯೇ ಕಾನೂನಿಗೆ ವಿರುದ್ಧವಾದ ಮಾಹಿತಿಯನ್ನು ನಕಲು ಅಥವಾ ಡೌನ್‌ಲೋಡ್ ಮಾಡದಂತೆ ಸೂಚನೆಯ ಫಲಕವನ್ನು ಹಾಕಬೇಕು.

(8) ಬಳಕೆದಾರರು ಕಂಪ್ಯೂಟರ್‌ನ ಸೆಟ್ಟಿಂಗನ್ನು ಬದಲಾಯಿಸುವುದನ್ನು ತಡೆಯುವಲ್ಲಿ ಸೈಬರ್ ಕೆಫೆಯವರು ಅಗತ್ಯಕ್ರಮಗಳನ್ನು ಕೈಗೊಳ್ಳಬೇಕು.

(9) ಸೈಬರ್ ಕೆಫೆಯು ಬಳಕೆದಾರರ ಗುರುತಿನ ಮಾಹಿತಿ ಮತ್ತು ಲಾಗ್ ರಿಜಿಸ್ಟರನ್ನು ಸುರಕ್ಷಿತವಾಗಿ ನಿರ್ವಹಣೆ ಮಾಡತಕ್ಕದ್ದು.

(10) ಸೈಬರ್ ಕೆಫೆಯು ತನ್ನ ಸಿಬ್ಬಂದಿಯ ಕಳೆದ ಒಂದು ವರ್ಷದ ದಾಖಲೆಗಳನ್ನು ನಿರ್ವಹಿಸಿರಬೇಕು.

(11) ಸೈಬರ್ ಕೆಫೆಯು ಲಾಗ್ ರಿಜಿಸ್ಟರನ್ನು ದುರ್ಬಳಕೆ ಅಥವಾ ಬದಲಾವಣೆಗೆ ಉಪಯೋಗಿಸತಕ್ಕದ್ದಲ್ಲ.

7. **ಸೈಬರ್ ಕೆಫೆಗಳ ಪರಿವೀಕ್ಷಣೆ :** (1) ನೋಂದಾವಣೆ ಏಜೆನ್ಸಿಯ ಅಧೀಕೃತ ಅಧಿಕಾರಿಯು, ಸೈಬರ್ ಕೆಫೆಯನ್ನು ಪರೀಕ್ಷಿಸಲು ಮತ್ತು ಪರಿಶೀಲಿಸಲು ಹಾಗು ಕಂಪ್ಯೂಟರ್‌ಗಳ ನೆಟ್‌ವರ್ಕ್ ಸ್ಥಾಪನೆಯನ್ನು ಕಾನೂನಾತ್ಮಕವಾಗಿ ಪರಿವೀಕ್ಷಿಸಲು ಅಧಿಕಾರ ನೀಡಲಾಗಿದೆ. ಸೈಬರ್ ಕೆಫೆಯ ಮಾಲೀಕರು ಎಲ್ಲಾ ರೀತಿಯ ದಾಖಲಾತಿಗಳು, ರಿಜಿಸ್ಟರ್‌ಗಳು ಹಾಗು ಇನ್ಯಾವುದೇ ಅಗತ್ಯದ ಮಾಹಿತಿಯನ್ನು ಅಧಿಕಾರಿ ಅಗತ್ಯವೆನಿಸಿದರೆ ಪರಿಶೀಲನೆ ಮಾಡಬಹುದಾಗಿದೆ.

[F. No. 11(3)/2011-CLFE]

ಎನ್. ರವಿ ಶಂಕರ್, ಜಂಟಿ ಕಾರ್ಯದರ್ಶಿ.